**All India Radio: Bangalore**
**National Bulletin In Kannada**
**22.06.2026  13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.06.2026  13.10 hrs**

**<>><><*><><<>**

ಮುಖ್ಯಾಂಶಗಳು

**೧. ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನವನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ; 'ಪ್ರಾಜೆಕ್ಟ್ ಚೀತಾ'ದ ಪ್ರಗತಿ ಪರಿಶೀಲನೆ**

**೨. ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಇಂದಿನಿಂದ ಮಂಗೋಲಿಯಾ, ದಕ್ಷಿಣ ಕೊರಿಯಾಕ್ಕೆ ಅಧಿಕೃತ ಪ್ರವಾಸ**

**೩. ನವದೆಹಲಿಯಲ್ಲಿ ಇಂದಿನಿಂದ ಬ್ರಿಕ್ಸ್ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆ**

**೪. ಫಿಫಾ ವಿಶ್ವಕಪ್ ಪುಟ್ಬಾಲ್; ನ್ಯೂಜಿಲೆಂಡ್ ವಿರುದ್ಧ ೩-೧ ಗೋಲುಗಳಿಂದ ಈಜಿಪ್ಟ್‌ಗೆ ಜಯ**

**<>><><*><><<>**

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಇಂದಿನಿಂದ ಮಂಗೋಲಿಯಾ ಮತ್ತು ದಕ್ಷಿಣ ಕೊರಿಯಾಕ್ಕೆ ಅಧಿಕೃತ ಪ್ರವಾಸ ಆರಂಭಿಸಿದ್ದಾರೆ. ಪ್ರವಾಸದ ಮೊದಲ ಚರಣದಲ್ಲಿ ಅವರು ಇಂದು ಮಂಗೋಲಿಯಾ ತಲುಪಿದ್ದಾರೆ. ಭಾರತ ಮತ್ತು ಮಂಗೋಲಿಯಾ ನಡುವಿನ ವಿಶೇಷ ಪಾಲುದಾರಿಕೆಯನ್ನು ಮುನ್ನಡೆಸಲು ಫಲಪ್ರದ ಮಾತುಕತೆಗಳನ್ನು ಎದುರು ನೋಡುತ್ತಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಭೇಟಿಯ ಸಮಯದಲ್ಲಿ ಅವರು, ಮಂಗೋಲಿಯಾ ವಿದೇಶಾಂಗ ಸಚಿವ ಬಿ.ಬ್ಯಾಟ್ಸೆಟ್ಸೆಗ್ ಸೇರಿದಂತೆ ಉನ್ನತ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಬಳಿಕ ಡಾ. ಎಸ್. ಜೈಶಂಕರ್ ಅವರು ಈ ತಿಂಗಳ ೨೪ ಮತ್ತು ೨೫ ರಂದು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಲಿದ್ದಾರೆ. ಭೇಟಿಯ ಸಮಯದಲ್ಲಿ, ದಕ್ಷಿಣ ಕೊರಿಯಾ ವಿದೇಶಾಂಗ ಸಚಿವ ಚೋ ಹ್ಯುನ್ ಅವರೊಂದಿಗೆ ಚರ್ಚೆ ನಡೆಸಲಿದ್ದಾರೆ. ಜೆಜುವಿನಲ್ಲಿ ಇದೇ

ಗುರುವಾರ ’ಶಾಂತಿ ಮತ್ತು ಸಮೃದ್ಧಿಗಾಗಿ ಜೆಜು’ ವೇದಿಕೆಯಲ್ಲಿ ಸಚಿವರು ಪ್ರಮುಖ ಭಾಷಣ ಮಾಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

**<>><><*><><<>**

ಸಂಸದ ಶಶಿ ತರೂರ್ ಅಧ್ಯಕ್ಷತೆಯ ವಿದೇಶಾಂಗ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು, ಕಾರ್ಯತಂತ್ರದ ಗಡಿ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಸ್ಯೆಗಳನ್ನು ಪರಿಶೀಲಿಸಲು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ಗೆ ನಾಲ್ಕು ದಿನಗಳ ಅಧ್ಯಯನ ಭೇಟಿ ಪ್ರಾರಂಭಿಸಿದೆ. ಗಡಿ ನಿರ್ವಹಣೆ ಮತ್ತು ಗಡಿ ಪ್ರದೇಶಗಳಲ್ಲಿ ಭದ್ರತಾ ಪರಿಸ್ಥಿತಿ ಕುರಿತು ನೇರ ಒಳನೋಟಗಳನ್ನು ಪಡೆಯಲು ಸಮಿತಿಯು ಇದೇ ೨೫ರವರೆಗೆ ಜಮ್ಮು, ಕಾಶ್ಮೀರ, ಕಾರ್ಗಿಲ್ ಮತ್ತು ಲೇಹ್‌ಗೆ ಭೇಟಿ ನೀಡಲಿದೆ. ಭಾರತದ ದ್ವಿಪಕ್ಷೀಯ ಸಂಬಂಧಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು, ಸಿಂಧು ಜಲ ಒಪ್ಪಂದ ರದ್ದು, ಗಡಿ ನಿಯಂತ್ರಣಾ ರೇಖೆ ಮತ್ತು ಅಂತಾರಾಷ್ಟ್ರೀಯ ಗಡಿಯಲ್ಲಿ ಭಯೋತ್ಪಾದನೆಯಿಂದ ಉಂಟಾಗುವ ಬೆದರಿಕೆಯನ್ನು ಸಮಿತಿ ಪರಿಶೀಲಿಸುತ್ತಿದೆ. ಅಲ್ಲದೆ, ಭಾರತ-ಚೀನಾ ಸಂಬಂಧಗಳು ಮತ್ತು ಪೂರ್ವ ಲಡಾಖ್‌ನಲ್ಲಿ ವಾಸ್ತವಿಕ ಗಡಿ ನಿಯಂತ್ರಣಾ ರೇಖೆ ಉದ್ದಕ್ಕೂ ಇರುವ ಪರಿಸ್ಥಿತಿಯ ಮೇಲೂ ಕೇಂದ್ರೀಕರಿಸಲಿದೆ.

**<>><><*><><<>**

ಭಾರತ ಇಂದು ನವದೆಹಲಿಯಲ್ಲಿ ಬ್ರಿಕ್ಸ್ ರಾಷ್ಟ್ರೀಯ ಭದ್ರತಾ ಸಲಹೆಗಾರರ ಎರಡು ದಿನಗಳ ಸಭೆಯನ್ನು ಆಯೋಜಿಸಲಿದೆ.  ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅಧ್ಯಕ್ಷತೆ ವಹಿಸಲಿದ್ದು, ಸಭೆಯು ೧೧ ಸದಸ್ಯ ರಾಷ್ಟ್ರಗಳ ಭದ್ರತಾ ಮುಖ್ಯಸ್ಥರನ್ನು ಒಟ್ಟುಗೂಡಿಸುತ್ತದೆ. ಇವುಗಳಲ್ಲಿ ಭಾರತ, ಬ್ರೆಜಿಲ್, ಚೀನಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್, ರಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ ಮತ್ತು ಯುಎಇ ಸೇರಿವೆ.  ಈ ಸಭೆಯು ’ಜಗತ್ತು ಇಂದು ಎದುರಿಸುತ್ತಿರುವ ಭದ್ರತಾ ಸವಾಲುಗಳು’ ಎಂಬ ವಿಷಯದ ಮೇಲೆ ಕೇಂದ್ರೀಕರಿಸುತ್ತದೆ. ರಾಷ್ಟ್ರೀಯ ಭದ್ರತಾ ಬೆದರಿಕೆಗಳ ವೇಗವಾಗಿ ವಿಕಸನಗೊಳ್ಳುತ್ತಿರುವ ಸ್ವರೂಪ ಮತ್ತು ಎದುರಾಗುತ್ತಿರುವ ಭದ್ರತಾ ಅಪಾಯಗಳಲ್ಲಿ ಹೊಸ ತಂತ್ರಜ್ಞಾನಗಳ ಪಾತ್ರದ ಕುರಿತು ಚರ್ಚೆಗಳು ಗಮನ ಹರಿಸಲಿವೆ.  ೨೦೨೬ ರಲ್ಲಿ ಭಾರತ ನಾಲ್ಕನೇ ಬಾರಿಗೆ ಬ್ರಿಕ್ಸ್ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವುದರಿಂದ ಈ ಸಭೆ ನಡೆಯುತ್ತಿದೆ. ಭಾರತದ ಅಧ್ಯಕ್ಷತೆಯು ’ಸ್ಥಿತಿಸ್ಥಾಪಕತ್ವ,

ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ' ಎಂಬ ವಿಷಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

<>><><*><><<>

ಭಾರತ ತನ್ನ ೨೦೨೬ರ ಬ್ರಿಕ್ಸ್ ಅಧ್ಯಕ್ಷತೆ ಅಡಿಯಲ್ಲಿ ಇದೇ ತಿಂಗಳ ೨೫ ಮತ್ತು ೨೬ ರಂದು ಹರಿಯಾಣದಲ್ಲಿ ೧೧ನೇ ಬ್ರಿಕ್ಸ್ ಇಂಧನ ಸಚಿವರ ಸಭೆಯನ್ನು ಆಯೋಜಿಸಲಿದೆ. ಸಭೆಯು ಇಂಧನ ಭದ್ರತೆ ಮತ್ತು ಸುಸ್ಥಿರತೆ, ಇಂಧನ ಪ್ರವೇಶ ಮತ್ತು ಸಮಾನತೆ ಹಾಗೂ ತಂತ್ರಜ್ಞಾನ ಮತ್ತು ನಾವೀನ್ಯತೆ ಎಂಬ ಮೂರು ಪ್ರಮುಖ ಆದ್ಯತೆಗಳ ಮೇಲೆ ಕೇಂದ್ರೀಕರಿಸುತ್ತದೆ. ಇಂಧನ ಭದ್ರತೆ, ಸುಸ್ಥಿರತೆ ಮತ್ತು ನಾವೀನ್ಯತೆ ಕುರಿತು ಸಹಕಾರವನ್ನು ಬಲಪಡಿಸಲು ಎಲ್ಲಾ ೧೧ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಇಂಧನ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ವರ್ಷದ ಭಾರತದ ಬ್ರಿಕ್ಸ್ ಅಧ್ಯಕ್ಷತೆಯು ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ ಎಂಬ ವಿಷಯಗಳ ಕುರಿತು ಗಮನ ಕೇಂದ್ರೀಕರಿಸಲಿವೆ. ಜಾಗತಿಕ ದಕ್ಷಿಣದ ಆದ್ಯತೆಗಳನ್ನು ಮುನ್ನಡೆಸಲು ಮತ್ತು ಸಮಗ್ರ ಜಾಗತಿಕ ಇಂಧನ ಭವಿಷ್ಯವನ್ನು ರೂಪಿಸಲು ಈ ಸಭೆ ಭಾರತಕ್ಕೆ ಪ್ರಮುಖ ವೇದಿಕೆಯನ್ನು ಒದಗಿಸುತ್ತದೆ.

<>><><*><><<>

೧೯ನೇ ಮುಂಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಿನ್ನೆ ಸಂಪನ್ನಗೊಂಡಿತು. ಪೋಲೆಂಡ್‌ನ ಸಾಕ್ಷ್ಯ ಚಿತ್ರ 'ಸಿಲ್ವರ್' ಅಂತಾರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿ ಅತ್ಯುತ್ತಮ ಸಾಕ್ಷ್ಯಾಚಿತ್ರಕ್ಕಾಗಿ ಪ್ರತಿಷ್ಠಿತ ಗೋಲ್ಡನ್ ಕಾಂಚ್ ಪ್ರಶಸ್ತಿ ಪಡೆದುಕೊಂಡಿದೆ. ಅತ್ಯುತ್ತಮ ಅನಿಮೇಷನ್ ಚಿತ್ರಕ್ಕಾಗಿ 'ಮಾಯಾಸ್ ಸಾಂಗ್' ಹಾಗೂ ಅತ್ಯುತ್ತಮ ಕಿರುಚಿತ್ರಕ್ಕಾಗಿ 'ಅಂಡರ್ ದಿ ಸ್ನೋ' ಸಿಲ್ವರ್ ಕಾಂಚ್ ಪ್ರಶಸ್ತಿ ಪಡೆದಿವೆ. ರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿ ಅತ್ಯುತ್ತಮ ಅನಿಮೇಷನ್ ಚಿತ್ರಕ್ಕಾಗಿ 'ಅಂಗಲಮ್ಮನ್ ಕೋವಿಲ್ ಸ್ಟ್ರೀಟ್' ಹಾಗೂ ಅತ್ಯುತ್ತಮ ಕಿರುಚಿತ್ರಕ್ಕಾಗಿ 'ಸ್ಮಾಲ್ ಕ್ಲೌಡ್ಸ್' ಹಾಗೂ ಅತ್ಯುತ್ತಮ ಸಾಕ್ಷ್ಯ ಚಿತ್ರಕ್ಕಾಗಿ 'ವಾಯ್' ಸಿಲ್ವರ್ ಕಾಂಚ್ ಪ್ರಶಸ್ತಿ ತನ್ನದಾಗಿಸಿಕೊಂಡಿವೆ.

<>><><*><><<>

ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತು ಪ್ರಾದೇಶಿಕ ಭದ್ರತಾ ಸಮಸ್ಯೆಗಳನ್ನು ಪರಿಹರಿಸಲು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಹಿರಿಯ ನಿಯೋಗಗಳು ಸಭೆ ಸೇರಿದ್ದು, ಇರಾನ್‌ನೊಂದಿಗಿನ ಮಾತುಕತೆಗಳು

ಪ್ರಗತಿಯಲ್ಲಿವೆ ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ತಿಳಿಸಿದ್ದಾರೆ. ಲುಸೆರ್ನ್ ಸರೋವರದ ಮೇಲಿರುವ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಅಮೆರಿಕ ಮತ್ತು ಇರಾನ್‌ನ ನಿಯೋಗಗಳು ಮಾತುಕತೆ ಪ್ರಾರಂಭಿಸಿವೆ. ಸಭೆಗೆ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಜೆ.ಡಿ.ವ್ಯಾನ್ಸ್, ಮಾತುಕತೆಗಳು ಈಗಾಗಲೇ ಸಕಾರಾತ್ಮಕ ಫಲಿತಾಂಶಗಳನ್ನು ನೀಡಿದ್ದು, ಪ್ರಾಥಮಿಕವಾಗಿ ಇರಾನ್‌ನ ಪರಮಾಣು ಕಾರ್ಯಕ್ರಮದ ಮೇಲೆ ಕೇಂದ್ರೀಕೃತವಾಗಿದೆ. ಆದರೂ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಕದನ ವಿರಾಮವನ್ನು ಕಾಯ್ದುಕೊಳ್ಳುವ ಪ್ರಯತ್ನಗಳು ಸೇರಿದಂತೆ ಪ್ರಾದೇಶಿಕ ಭದ್ರತಾ ಸಮಸ್ಯೆಗಳು ಸಹ ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

<>><><*><><<>

ಪಶ್ಚಿಮ ಬಂಗಾಳದಲ್ಲಿ, ರಾಷ್ಟ್ರೀಯ ಹೆದ್ದಾರಿ-೨೭ ರ ಜಲಪೈಗುರಿ ಜಿಲ್ಲೆ ಜಲದಬರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ಆರಕ್ಕೆ ಏರಿದೆ. ಮೃತರಲ್ಲಿ ಇಬ್ಬರು ಮಹಿಳೆಯರು ಮತ್ತು ಒಂದು ಮಗು ಸೇರಿದ್ದಾರೆ. ಘಟನೆಯಲ್ಲಿ ೨೫ ಪ್ರಯಾಣಿಕರು ಗಾಯಗೊಂಡಿದ್ದು, ಜಲಪೈಗುರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ಸುಮಾರು ೩೨ ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಉತ್ತರ ಬಂಗಾಳ ರಾಜ್ಯ ಸಾರಿಗೆ ನಿಗಮದ ಬಸ್, ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದು, ಈ ಅವಘಡ ಸಂಭವಿಸಿದೆ. ಪೊಲೀಸರು, ಜಿಲ್ಲಾಡಳಿತ ಅಧಿಕಾರಿಗಳು ಮತ್ತು ಸ್ಥಳೀಯ ನಿವಾಸಿಗಳು ತಕ್ಷಣ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ನಡೆಸಿ, ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದರು. ಘಟನೆ ಕುರಿತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

<>><><*><><<>

ಕತಾರ್‌ನ ಪ್ರಮುಖ ನೈಸರ್ಗಿಕ ಅನಿಲ ರಫ್ತು ಮೂಲಸೌಕರ್ಯದಲ್ಲಿ ಸ್ಫೋಟ ಸಂಭವಿಸಿದ್ದು, ಕನಿಷ್ಠ ೫೪ ಜನರು ಗಾಯಗೊಂಡಿದ್ದು, ೧೮ ಮಂದಿ ಕಾಣೆಯಾಗಿದ್ದಾರೆ. ಅಧಿಕೃತ ವರದಿಗಳ ಪ್ರಕಾರ, ವಿಶ್ವದ ಪ್ರಮುಖ ಇಂಧನ ಕೇಂದ್ರಗಳಲ್ಲಿ ಒಂದಾದ ರಾಸ್ ಲಫಾನ್ ಕೈಗಾರಿಕಾ ಪ್ರದೇಶದಲ್ಲಿ ನಿನ್ನೆ ರಾತ್ರಿ ಸ್ಫೋಟ ಸಂಭವಿಸಿದೆ. ಬರ್ಜಾನ್ ಅನಿಲ ಪೂರೈಕೆ ಸೌಲಭ್ಯದಲ್ಲಿ ದೊಡ್ಡ ಬೆಂಕಿ

ಕಾಣಿಸಿಕೊಂಡಿದೆ. ತುರ್ತು ಪ್ರತಿಕ್ರಿಯೆ ತಂಡಗಳು ಸ್ಥಳಕ್ಕೆ ಧಾವಿಸಿ, ಕಾರ್ಯಾಚರಣೆ ನಡೆಸುತ್ತಿವೆ. ಸ್ಫೋಟದ ಕಾರಣದ ಬಗ್ಗೆ ಅಧಿಕಾರಿಗಳು ತನಿಖೆ ಪ್ರಾರಂಭಿಸಿದ್ದಾರೆ. ತುರ್ತು ಮತ್ತು ಭದ್ರತಾ ತಂಡಗಳು ಸ್ಥಳದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರೆಸಿವೆ.

**<>><><*><><<>**

೨೦೨೬ ರ ಫಿಫಾ ವಿಶ್ವಕಪ್ ಫುಟ್ಬಾಲ್‌ನಲ್ಲಿ, ಇಂದು ವ್ಯಾಂಕೋವರ್‌ನಲ್ಲಿ ನಡೆದ 'ಜಿ' ಗುಂಪಿನ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ೩-೧ ಗೋಲುಗಳಿಂದ ಈಜಿಪ್ಟ್ ಜಯ ಸಾಧಿಸಿತು. ಈಜಿಪ್ಟ್ ಪರ ಮೊಹಮ್ಮದ್ ಸಲಾಹ್ ಪಂದ್ಯಾವಳಿಯಲ್ಲಿ ತಮ್ಮ ಮೊದಲ ಗೋಲು ಗಳಿಸಿದರು. ಈ ಗೆಲುವಿನೊಂದಿಗೆ, ಈಜಿಪ್ಟ್ 'ಜಿ' ಗುಂಪಿನಲ್ಲಿ ಮೊದಲ ಸ್ಥಾನ ಪಡೆದುಕೊಂಡಿತು. ಇದಕ್ಕೂ ಮುನ್ನ ಇಂದು ಬೆಳಗ್ಗೆ ಫ್ಲೋರಿಡಾದಲ್ಲಿ ನಡೆದ ಕೇಪ್ ವರ್ಡೆ ಮತ್ತು ಉರುಗ್ವೆ ತಂಡಗಳ ನಡುವಿನ 'ಎಚ್' ಗುಂಪಿನ ಪಂದ್ಯ ೨-೨ ಗೋಲುಗಳಿಂದ ಡ್ರಾ ದಲ್ಲಿ ಕೊನೆಗೊಂಡಿತು. ಅರ್ಜೆಂಟೀನಾ ಮತ್ತು ಆಸ್ಟ್ರಿಯಾ ನಡುವಿನ 'ಜೆ' ಗುಂಪಿನ ಪಂದ್ಯ ಭಾರತೀಯ ಕಾಲಮಾನ ಇಂದು ರಾತ್ರಿ ೧೦:೩೦ ಕ್ಕೆ ಆರಂಭವಾಗಲಿದೆ.

**<>><><*><><<>**

ಜೆಕಿಯಾ ದೇಶದಲ್ಲಿ ನಡೆದ ೫೬ನೇ ಉಸ್ತಿ ನಾಡ್ ಲಾಬೆಮ್ ಆಹ್ವಾನಿತ ಬಾಕ್ಸಿಂಗ್ ಪಂದ್ಯಾವಳಿಯಲ್ಲಿ ಭಾರತದ ಬಾಕ್ಸರ್‌ಗಳು ಎಂಟು ಚಿನ್ನ ಸೇರಿದಂತೆ ಒಟ್ಟು ೧೨ ಪದಕಗಳನ್ನು ಗೆದ್ದು ಗಮನಾರ್ಹ ಸಾಧನೆ ಮಾಡಿದ್ದಾರೆ. ಮಹಿಳೆಯರ ೭೫ ಕೆ.ಜಿ. ವಿಭಾಗದಲ್ಲಿ ಲವ್ಲಿನಾ ಬೊರ್ಗೊಹೈನ್, ೫೪ ಕೆ.ಜಿ. ವಿಭಾಗದಲ್ಲಿ ಪ್ರೀತಿ ಪವಾರ್, ೫೧ ಕೆ.ಜಿ. ವಿಭಾಗದಲ್ಲಿ ಸಾಕ್ಷಿ ಚೌಧರಿ ಹಾಗೂ ೬೦ ಕೆ.ಜಿ. ವಿಭಾಗದಲ್ಲಿ ಪ್ರಿಯಾ ಘಂಘಾಸ್ ಚಿನ್ನದ ಪದಕಗಳನ್ನು ಗೆದ್ದರು. ೬೫ ಕೆ.ಜಿ. ವಿಭಾಗದಲ್ಲಿ ಪರ್ವೀನ್ ಹೂಡಾ ಬೆಳ್ಳಿ ಪದಕಕ್ಕೆ ಪಾತ್ರರಾದರು. ಪುರುಷರ ೫೫ ಕೆ.ಜಿ. ವಿಭಾಗದಲ್ಲಿ ಜದುಮಣಿ ಸಿಂಗ್, ೬೦ ಕೆ.ಜಿ. ವಿಭಾಗದಲ್ಲಿ ಸಚಿನ್, ೮೦ ಕೆ.ಜಿ. ವಿಭಾಗದಲ್ಲಿ ಅಂಕುಶ್ ಹಾಗೂ ೯೦ ಕೆ.ಜಿಗಿಂತ ಹೆಚ್ಚಿನ ವಿಭಾಗದಲ್ಲಿ ನರೇಂದರ್ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧.೩೦ ಕ್ಕೆ ><><<>**